# ಸಾಧುಸಂತರ ದಿವ್ಯ ಸ್ಮೃತಿಗಳು

ಆಂಗ್ಲಮೂಲ: **'ವೇದಾಂತ ಕೇಸರಿ' ಮಾಸಪತ್ರಿಕೆ** ಅನುವಾದ : **ಮಾತಾ ತ್ಯಾಗಮಯೀ**

## ಪ್ರಾರ್ಥನೆಯ ಪವಾಡ

ಭಕ್ತಿಶಾಸ್ತ್ರಗಳು ಪ್ರಾರ್ಥನೆಯ ಪವಾಡವನ್ನು ಎತ್ತಿಹಿಡಿದಿವೆ. ಒಂದು ದಿನ ಸಾಯಂಕಾಲ ಬೇಲ್‌ಘರಿಯಾ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದ ಸ್ವಾಮಿ ಸಂತೋಷಾನಂದರು ಸ್ವಾಮಿ ಶಾಂತಾನಂದಜಿಯವರನ್ನು ಭೇಟಿಯಾಗಲು ಹೋದರು. ಅವರಿಬ್ಬರೂ ಶ್ರೀಮಾತೆಯವರ ಶಿಷ್ಯರು. ಸ್ವಾಮಿ ಸಂತೋಷಾನಂದರು ವಯಸ್ಸಿನಲ್ಲೂ ಸಂನ್ಯಾಸದಲ್ಲೂ ಸ್ವಾಮಿ ಶಾಂತಾನಂದರಿಗಿಂತ ಕಿರಿಯರು. ಅವರು ಸ್ವಾಮಿ ಶಾಂತಾನಂದರಿಗೆ ಪ್ರಣಾಮ ಮಾಡಿ, ''ಮಹಾರಾಜ್, ಪಶ್ಚಿಮ ಬಂಗಾಳವು ಭೀಕರ ಬರಗಾಲದಿಂದ ತತ್ತರಿಸುತ್ತಿದೆ. ಈಗ ಮಳೆ ಸುರಿಯದಿದ್ದರೆ ವ್ಯವಸಾಯವನ್ನೇ ಅವಲಂಬಿಸಿಕೊಂಡಿರುವ ಬಡಜನರು ಉಪವಾಸದಿಂದ ಸಾವನ್ನಪ್ಪುವಂತಾಗುತ್ತದೆ. ನೀವು ಶ್ರೀಮಾತೆಯವರ ಬಳಿ ಮಳೆಗಾಗಿ ಏಕೆ ಪ್ರಾರ್ಥಿಸುತ್ತಿಲ್ಲ?'' ಎಂದು ಕೇಳಿದರು.

ಸ್ವಾಮಿ ಶಾಂತಾನಂದರು ಮಗುವಿನ ಮುಗ್ಧ ಮಂದಹಾಸ ಬೀರಿ, ಸ್ವಾಮಿ ಸಂತೋಷಾನಂದರ ಕಡೆಗೆ ಮುಖಮಾಡಿ, ''ನೀನೂ ಶ್ರೀಮಾತೆಯವರ ಮಗು. ನೀನೇಕೆ ಅವರ ಬಳಿ ಪ್ರಾರ್ಥಿಸಬಾರದು?'' ಎಂದು ಕೇಳಿದರು. ಬಳಿಕ ಅಲ್ಲಿ ಒಂದು ಅದ್ಭುತ ನಡೆಯಿತು.

ಶ್ರೀಮಾತೆಯವರು ಈ ಇಬ್ಬರೂ ಸಂನ್ಯಾಸಿ ಶಿಷ್ಯರು, 'ಅಮ್ಮಾ, ಅಮ್ಮಾ' ಎಂದು ಹೃದಯವಿದ್ರಾವಕವಾಗಿ ಅವರನ್ನು ಕರೆಯುತ್ತ ಅಳಲಾರಂಭಿಸಿದರು. ನಾವೆಲ್ಲ ಮೂಕವಿಸ್ಮಿತರಾಗಿ ಕುಳಿತು ಈ ಅದ್ಭುತವಾದ ಪ್ರಾರ್ಥನೆಯ ದೃಶ್ಯವನ್ನು ನೋಡತೊಡಗಿದೆವು. ಸಾಯಂಕಾಲವಾಗುತ್ತ ಬಂತು. ನಾನು ಹಾಸ್ಟೆಲಿಗೆ ಮರಳಿ, ಎಂದಿನ ದಿನಚರಿಯನ್ನು ಮುಂದುವರಿಸಿದೆ. ರಾತ್ರಿ ನಾನು ಮಲಗಲು ಸಿದ್ಧನಾಗುತ್ತಿದ್ದೆ. ಮಳೆ ಆರಂಭವಾಗಿಯೇ ಬಿಟ್ಟಿತು! ರಾತ್ರಿಯೆಲ್ಲ ಮಳೆ ಸುರಿಯಿತು. ಇಬ್ಬರು ಸಂತರ ಕಂಬನಿದುಂಬಿದ ಪ್ರಾರ್ಥನೆಯಿಂದ ಪಶ್ಚಿಮ ಬಂಗಾಳದ ಜನ ಮಳೆ-ಬೆಳೆಯನ್ನು ಕಾಣುವಂತಾಯಿತು. *— ಸ್ವಾಮಿ ದಿವ್ಯಾನಂದ*

## ಶಾಸ್ತ್ರಾಧ್ಯಯನ

ಸ್ವಾಮಿ ವೀರೇಶ್ವರಾನಂದಜಿಯವರ ಪಾಂಡಿತ್ಯ, ತ್ಯಾಗ, ಭಕ್ತಿ ಮತ್ತು ನಿಯಮಿತ ಜೀವನಶೈಲಿಯಿಂದ ನಾನು ಪ್ರಭಾವಿತನಾಗಿದ್ದೆ. ಅವರಿಗೆ ಶಾಸ್ತ್ರಾಧ್ಯಯನ ಪ್ರಿಯವಾಗಿತ್ತು. ಮಾತ್ರವಲ್ಲ, ಇತರರನ್ನೂ ಅವರು ಶಾಸ್ತ್ರಾಧ್ಯಯನಕ್ಕೆ ಪ್ರೋತ್ಸಾಹಿಸುತ್ತಿದ್ದರು. ತಾವು ಏನನ್ನಾದರೂ ಬರೆಯದೆ ಒಂದು ದಿನ ಕಳೆದುಹೋದರೆ ಅವರಿಗೆ ಬಹಳ ವ್ಯಥೆಯಾಗುತ್ತಿತ್ತು. ಹಾಗೆಯೇ ನಮ್ಮ ಅಧ್ಯಯನ ಸರಿಯಾಗಿ ನಡೆಯುತ್ತಿರುವುದೇ ಎಂಬುದರ ಮೇಲೂ ಅವರು ಕಣ್ಣು ಇಟ್ಟಿರುತ್ತಿದ್ದರು. ತಮ್ಮ ಮಹಾಸಮಾಧಿಗೆ ಕೆಲವು ತಿಂಗಳ ಮುನ್ನ ಅವರು ನನಗೆ ಹೇಳಿದ್ದರು, ''ನೋಡು, ನಾನು ತೀರಿಕೊಂಡ ಮೇಲೆ, ನಿನಗೆ ಎಲ್ಲಿಗೇ ವರ್ಗಾವಣೆಯಾದರೂ ಸರಿ, ಉಪನಿಷತ್ತುಗಳ ಅಧ್ಯಯನವನ್ನು ಬಿಡಬೇಡ.'' ಹೀಗೆ ಅವರು ನಮ್ಮನ್ನು ಪ್ರೋತ್ಸಾಹಿಸುತ್ತಿದ್ದರು.

ಹಿಂದೆ ಒಮ್ಮೆ ನಾವು ಅಗರ್ತಲಾಗೆ ಹೋಗಿದ್ದೆವು. ಅಂದು ಸಾಯಂಕಾಲ ಅವರು ನನಗೆ, ''ರತನ್, ಇಂದು ಏನಾದರೂ ಅಧ್ಯಯನ ಮಾಡಿದೆಯಾ?'' ಎಂದು ಕೇಳಿದರು.

ನಾನು, ''ಇಲ್ಲ, ಮಹಾರಾಜ್'' ಎಂದು ಹೇಳಿದೆ. ಅವರು ಏಕೆ ಓದಲಿಲ್ಲ ಎಂದು ಕೇಳಿದರು.

ನಾನು ಅದಕ್ಕೆ, ''ನನಗೆ ಓದಲು ಸಮಯ ಸಿಗಲಿಲ್ಲ. ಇಲ್ಲಿಗೆ ಬಂದ ಮೇಲೆ ಸಾಮಾನುಗಳನ್ನು ಜೋಡಿಸುವುದರಲ್ಲೇ ಸಮಯ ಕಳೆದು ಹೋಯಿತು'' ಎಂದೆ. ಅದಕ್ಕೆ ಅವರು, ''ನೋಡು, ಅವೆಲ್ಲವುಗಳ ನಡುವೆ ನೀನು ಅಧ್ಯಯನಕ್ಕಾಗಿ ಸ್ವಲ್ಪ ಸಮಯ ಮಾಡಿಕೊಳ್ಳಬೇಕಾಗಿತ್ತು. ಸಮುದ್ರದ ಅಲೆಗಳು ನಿಂತ ಮೇಲೆ ಸ್ನಾನ ಮಾಡುತ್ತೇನೆ ಎಂದು ಹೇಳುವವನು ಮೂರ್ಖ'' ಎಂದರು.

ಅವರು ಆಗಾಗ, ''ನಿನ್ನ ಸಂಸ್ಕೃತ ಅಧ್ಯಯನ ಹೇಗೆ ಮುನ್ನಡೆಯುತ್ತಿದೆ?'' ಎಂದೂ ಕೇಳುತ್ತಿದ್ದರು. ಅವರು ರಾತ್ರಿ ಮಲಗುವ ಮುನ್ನ ನಾನು ಅವರಿಗೆ ಉಪನಿಷತ್ತಿನ ಹಾಗೂ ಗೀತೆಯ ಒಂದೊಂದು ಶ್ಲೋಕವನ್ನು ಪಠಿಸಿ ಹೇಳಬೇಕಿತ್ತು. ಒಂದು ರಾತ್ರಿ ಡಾಕ್ಟರರು ಅವರನ್ನು ಪರೀಕ್ಷಿಸಲು ಬಂದಿದ್ದರು. ಅಂದು ನಾನು ಶ್ಲೋಕವನ್ನು ಓದಬೇಕಾಗಿಲ್ಲ ಎಂದು ಯೋಚಿಸಿದೆ. ಆದರೆ ಅವರು ಮಲಗುವ ಮುನ್ನ ನನ್ನನ್ನು ಕರೆದು, ''ರತನ್, ಇವತ್ತು ನೀನು ಶ್ಲೋಕವನ್ನು ಹೇಳಲಿಲ್ಲ. ಶ್ಲೋಕವನ್ನು ಕೇಳದೆ ನನಗೆ ನಿದ್ರೆ ಬರುವುದಿಲ್ಲ'' ಎಂದರು. *— ಸ್ವಾಮಿ ಅಮಲಾತ್ಮಾನಂದ*